## ನೋಟು ನಿಮ್ಮದೇ!

ಜಿಪುಣ ಪರಮೇಶಿ ತನಗೆ ಗಂಡು ಮಗು ಜನಿಸಿದ ಕಾರಣ ಗಣಪತಿ ದೇವಸ್ಥಾನಕ್ಕೆ ಹೋಗಿದ್ದ. ಸಂಕಷ್ಟಹರ ಚತುರ್ಥಿ ಇದ್ದುದರಿಂದ ಭಕ್ತರು ಬಹಳ ಜನ ಇದ್ದರು. ಪೂಜೆ ಮುಗಿದು ಆರತಿ ತಟ್ಟೆಯೊಂದಿಗೆ ಅರ್ಚಕರು ಜನರ ಸಾಲಿನತ್ತ ಬಂದರು. ಪರಮೇಶಿ ಕಿಸೆಯನ್ನೆಲ್ಲ ತಡಕಾಡಿ ಒಂದು ರೂಪಾಯಿ ನಾಣ್ಯ ತೆಗೆದು ಹಾಕಿದ. ಆತನ ಹಿಂದೆ ನಿಂತಿದ್ದ ಮಹಿಳೆಯೊಬ್ಬಳು ಕೈಯಲ್ಲಿ 2,000 ರೂಪಾಯಿ ನೋಟು ಹಿಡಿದು ಕೈ ಚಾಚಿದಳು. ಆಕೆ ದೂರವಿದ್ದ ಕಾರಣ ಅವಳಿಗೆ ಆರತಿ ತಟ್ಟೆ ಎಟುಕುತ್ತಿಲ್ಲ ಎನ್ನುವುದನ್ನು ಮನಗಂಡ ಪರಮೇಶಿ ಆ ನೋಟನ್ನು ಪಡೆದು ಆರತಿ ತಟ್ಟೆಗೆ ಹಾಕಿದ. ಸಂತುಷ್ಟರಾದ ಅರ್ಚಕರು ಅವನಿಗೆ ವಿಶೇಷ ಲಾಡುಪ್ರಸಾದ ಕೊಟ್ಟರು. ಹೊರಗೆ ಬಂದು ಆ ಮಹಿಳೆಯನ್ನು ಹುಡುಕಿ ಪ್ರಸಾದ ಕೊಟ್ಟು, 'ಈ ಪ್ರಸಾದ ತಗೊಳ್ಳಿ. ಆ ನೋಟನ್ನು ನಾನೇ ಹಾಕಿದ್ದು ಅಂತ ಅರ್ಚಕರು ನನಗೆ ಪ್ರಸಾದ ಕೊಟ್ಟರು' ಎಂದ. ಆಕೆ, 'ಇಲ್ಲ, ಈ ಪ್ರಸಾದ ನಿಮ್ಮದೆ. ಆ 2,000 ರೂಪಾಯಿ ನನ್ನದಲ್ಲ. ನೀವು ಕಿಸೆಯಿಂದ ಚಿಲ್ಲರೆ ತೆಗೆಯುವಾಗ ಬಿದ್ದ ನೋಟನ್ನು ನಿಮಗೆ ಕೊಟ್ಟೆ ಅಷ್ಟೆ' ಎಂದಳು!



**ಕಾವ್ಯಾ ಶಿವಾನಂದ**

## ತಿರುಗುಬಾಣ

ಆವತ್ತು ಗುಂಡಿಯ ಗೆಳತಿಯರು ಮನೆಗೆ ಬರುವವರಿದ್ದರು. ಅವರಿಗಾಗಿ ಸ್ಯಾಂಡ್‌ವಿಚ್ ಮಾಡಲು ಬಯಸಿದ್ದ ಗುಂಡಿ ಪತಿ ವೆಂಕನಿಗೆ ಸ್ಯಾಂಡ್‌ವಿಚ್ ಬ್ರೆಡ್ ತರಲು ಹೇಳಬೇಕಿತ್ತು. ಸುಮ್ಮನೇ ಹೇಳಿದರೆ ಆತ ತರುವವನಲ್ಲವಾದ್ದರಿಂದ ಒಂದು ಉಪಾಯ ಮಾಡಿದಳು. ಅದರಂತೆ, 'ರೀ, ಸಂಜೆ ನಿಮ್ಮ ಗರ್ಲ್‌ಫ್ರೆಂಡ್ ಊರ್ವಶಿ ಬರ್ತಾಳಂತೆ ಮನೆಗೆ. ನೀವು ಸ್ವಲ್ಪ ಬೇಗ ಬನ್ನಿ, ಹಾಗೇ ಬರ್ತಾ ಸ್ಯಾಂಡ್‌ವಿಚ್ ಬ್ರೆಡ್ ತನ್ನಿ' ಎಂದಳು. 'ನಾನೀಗ ಊರ್ವಶಿ ಜೊತೆನೇ ಇದ್ದೇನೆ ಕಣೆ' ಎಂದ ವೆಂಕ. 'ಎಲ್ಲಿದ್ದೀರಿ ಈಗ?' ಅರಚಿದಳು ಗುಂಡಿ. 'ಇಲ್ಲೇ ಬೇಕರಿ ಹತ್ತಿರ ಇದ್ದೀವಿ' ಎಂದ ವೆಂಕ. ಗುಂಡಿ ಕೂಡಲೇ ಬೇಕರಿ ಹತ್ತಿರ ಓಡಿದಳು. ಅಲ್ಲಿ ಗಂಡ ಕಾಣಲಿಲ್ಲ. ಫೋನ್ ಹಚ್ಚಿದಳು, 'ರೀ, ಎಲ್ಲಿದ್ದೀರಾ ನೀವು, ಕಾಣ್ತಾ ಇಲ್ಲವಲ್ಲ' ಅಸಮಾಧಾನದಿಂದ ಕಿರುಚಿದಳು. ವೆಂಕ, 'ನಾನು ಆಫೀಸಲ್ಲಿ ಇದ್ದೀನಿ ಕಣೆ. ಏನಿಲ್ಲ, ಹೇಗೂ ಅಲ್ಲಿವರೆಗೆ ಬಂದಿದ್ದೀಯಲ್ಲ, ಬ್ರೆಡ್ ತಗೊಂಡು ಮನೆಗೆ ಹೋಗು' ಎಂದ.



**ಜ್ಯೋತಿ ಪರಬತ್**